CAREERINDIA

| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 63 ]
Total No. of Questions : 63 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24
[ Total No. of Printed Pages : 24

**ಸಂಕೇತ ಸಂಖ್ಯೆ : 01-K**
**Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ
# Subject : First Language — KANNADA

ದಿನಾಂಕ : 19. 06. 2012 ]
ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ]
ಪರಮಾವಧಿ ಅಂಕಗಳು : 125 ]

[ Date : 19. 06. 2012
[ Time : 9-30 A.M. to 12-45 P.M.
[ Max. Marks : 125

## FOR OFFICE USE ONLY

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 14. | | 27. | | 40. | | 53. | |
| 2. | | 15. | | 28. | | 41. | | 54. | |
| 3. | | 16. | | 29. | | 42. | | 55. | |
| 4. | | 17. | | 30. | | 43. | | 56. | |
| 5. | | 18. | | 31. | | 44. | | 57. | |
| 6. | | 19. | | 32. | | 45. | | 58. | |
| 7. | | 20. | | 33. | | 46. | | 59. | |
| 8. | | 21. | | 34. | | 47. | | 60. | |
| 9. | | 22. | | 35. | | 48. | | 61. | |
| 10. | | 23. | | 36. | | 49. | | 62. | |
| 11. | | 24. | | 37. | | 50. | | 63. | |
| 12. | | 25. | | 38. | | 51. | | × | |
| 13. | | 26. | | 39. | | 52. | | × | |
| | | | | | | | | ***Total Marks*** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

1698635

[ Turn over

www.careerindia.com

CAREERINDIA



*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 63 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಗಳ ಸಂಖ್ಯೆ :

(ಎ) ಹದಿಮೂರು (ಬಿ) ಐದು

(ಸಿ) ಇಪ್ಪತ್ತೈದು (ಡಿ) ಹತ್ತು

*ಉತ್ತರ :* ______________________

2. 'ಮೂಗ' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ :

(ಎ) ಸರ್ವನಾಮ (ಬಿ) ಭಾವನಾಮ

(ಸಿ) ಅನ್ವರ್ಥಕನಾಮ (ಡಿ) ಅಂಕಿತನಾಮ

*ಉತ್ತರ :* ______________________



www.careerindia.com

CAREERINDIA



3. "ತಜ್ಞರು ಬಹಳಷ್ಟು ಸಂಶೋಧನೆಗಳನ್ನು ನಡೆಸಲಿ." ಈ ವಾಕ್ಯದಲ್ಲಿಯ ಕ್ರಿಯಾಪದವು ಈ ರೂಪದಲ್ಲಿದೆ :

(ಎ) ಸಂಭವನಾರ್ಥಕ (ಬಿ) ವಿಧ್ಯರ್ಥಕ

(ಸಿ) ನಿಷೇಧಾರ್ಥಕ (ಡಿ) ಆತ್ಮಾರ್ಥಕ

ಉತ್ತರ : ______________________

4. 'ಹಳ್ಳದಲ್ಲಿ' ಈ ಪದದಲ್ಲಿರುವ ವಿಭಕ್ತಿ :

(ಎ) ಸಪ್ತಮೀ (ಬಿ) ಷಷ್ಠೀ

(ಸಿ) ದ್ವಿತೀಯಾ (ಡಿ) ಪ್ರಥಮಾ

ಉತ್ತರ : ______________________

5. 'ಕಂಬನಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ :

(ಎ) ಲೋಪ ಸಂಧಿ (ಬಿ) ಆಗಮ ಸಂಧಿ

(ಸಿ) ಜಶ್ತ್ವ ಸಂಧಿ (ಡಿ) ಆದೇಶ ಸಂಧಿ

ಉತ್ತರ : ______________________

6. 'ಅತ್ಯಂತ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ :

(ಎ) ಗುಣ ಸಂಧಿ (ಬಿ) ಅನುನಾಸಿಕ ಸಂಧಿ

(ಸಿ) ಯಣ್ ಸಂಧಿ (ಡಿ) ವೃದ್ಧಿ ಸಂಧಿ

ಉತ್ತರ : ______________________

7. 'ಇರ್ಕುಂ' ಈ ಪದದ ಹೊಸಗನ್ನಡ ರೂಪವಿದು :

(ಎ) ಇರುವೆನು (ಬಿ) ಇರುವವು

(ಸಿ) ಇದ್ದೆ (ಡಿ) ಇದ್ದನು

ಉತ್ತರ : ______________________

www.careerindia.com

CAREERINDIA



8. 'ಬ್ಯಾಸಕಿ' ಪದದ ಗ್ರಾಂಥಿಕ ರೂಪ :

   (ಎ) ಬೇಸಿಗೆ (ಬಿ) ಬೆಸುಗೆ

   (ಸಿ) ಬಾಸುಗೆ (ಡಿ) ಬೇಸರ

   ಉತ್ತರ : ______________________________

9. 'ತುದಿಮೂಗು' ಪದವು ಈ ಸಮಾಸಕ್ಕೆ ಉದಾಹರಣೆ :

   (ಎ) ತತ್ಪುರುಷ (ಬಿ) ದ್ವಿಗು

   (ಸಿ) ದ್ವಂದ್ವ (ಡಿ) ಅಂಶಿ

   ಉತ್ತರ : ______________________________

10. ಹೆಚ್ಚಿನ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭಗಳಲ್ಲಿ ಬಳಸುವ ಲೇಖನ ಚಿಹ್ನೆ :

    (ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ

    (ಸಿ) ಆವರಣ ಚಿಹ್ನೆ (ಡಿ) ವಿವರಣಾತ್ಮಕ ಚಿಹ್ನೆ

    ಉತ್ತರ : ______________________________

11. "ಮಕ್ಕಳು ಶೈಕ್ಷಣಿಕ ಪ್ರವಾಸಕ್ಕೆ ಹೋಗಿದ್ದರು ಆದರೆ ಕೆಲವು ಸ್ಥಳಗಳನ್ನು ಮಾತ್ರ ತುಂಬಾ ಇಷ್ಟಪಟ್ಟರು." ಈ ವಾಕ್ಯವು :

    (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ

    (ಸಿ) ಮಿಶ್ರ ವಾಕ್ಯ (ಡಿ) ವಿದ್ಯರ್ಥಕ ವಾಕ್ಯ

    ಉತ್ತರ : ______________________________

12. 'ಅಗಣಿತ' ಈ ಪದದ ಅರ್ಥ :

    (ಎ) ಲೆಕ್ಕವಿಲ್ಲದ (ಬಿ) ಲೆಕ್ಕವಿರುವ

    (ಸಿ) ಲೆಕ್ಕಿಗ (ಡಿ) ಲೆಕ್ಕಾಚಾರ

    ಉತ್ತರ : ______________________________



www.careerindia.com

CAREERINDIA



13. "ಮಗುವನ್ನು ಶಾಲೆಯತನಕ ಬಿಟ್ಟು ಬಂದೆನು." ಈ ವಾಕ್ಯದಲ್ಲಿರುವ ತದ್ಧಿತಾಂತ ಅವ್ಯಯ :

(ಎ) ಮಗು (ಬಿ) ಶಾಲೆ

(ಸಿ) ಬಂದೆ (ಡಿ) ಶಾಲೆಯತನಕ

ಉತ್ತರ : ______

14. 'ವಿದ್ಯಾರ್ಥಿ' ಈ ಪದದಲ್ಲಿರುವ ಗಣ :

(ಎ) ಮ-ಗಣ (ಬಿ) ನ-ಗಣ

(ಸಿ) ತ-ಗಣ (ಡಿ) ಸ-ಗಣ

ಉತ್ತರ : ______

15. 'ಭವಸಮುದ್ರ' ಇಲ್ಲಿರುವ ಅಲಂಕಾರ :

(ಎ) ಉಪಮಾ (ಬಿ) ರೂಪಕ

(ಸಿ) ಉತ್ಪ್ರೇಕ್ಷ (ಡಿ) ದೃಷ್ಟಾಂತ

ಉತ್ತರ : ______

16. ಕೆಳಗಿನ 'ಅ' ಪಟ್ಟಿಯ ಅಂಶಗಳಿಗೆ ಸರಿಹೊಂದುವ ಪದಗಳನ್ನು 'ಬ' ಪಟ್ಟಿಯಿಂದ ಕ್ರಮಾಕ್ಷರದೊಂದಿಗೆ ಆರಿಸಿ, ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿ ಬರೆಯಿರಿ : 5 × 1 = 5

| | ಅ | | ಬ |
|---|---|---|---|
| i) | ಪರ್ಷಿಯನ್ | ಅ ) | ಜುಳುಜುಳು |
| ii) | ಬೆನಕ | ಆ ) | ಕಣ್ಣಲ್ಲಿ ಕಣ್ಣಿಡು |
| iii) | ದ್ವಿರುಕ್ತಿ | ಇ ) | ಗುಣ ಸಂಧಿ |
| iv) | ಅನುಕರಣಾವ್ಯಯ | ಈ ) | ಮ-ಗಣ |
| v) | ಪಡೆನುಡಿ | ಉ ) | ನಗುನಗುತ |
| | | ಊ ) | ವಿನಾಯಕ |
| | | ಋ ) | ದಿವಾನ |
| | | ಎ ) | ಕನಕ |

ಉತ್ತರ : i) ______

ii) ______

iii) ______

iv) ______

v) ______



www.careerindia.com

CAREERINDIA



ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ಕನ್ನಡ ಭಾಷೆಯು .................................................................................. ಭಾಷಾ ವರ್ಗಕ್ಕೆ ಸೇರಿದೆ.

18. ಹರಿಗೋಲನ್ನು ನಡೆಸಲು ............................................................................................ ಬೇಕು.

19. ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ......................................................................... ದೇಶಮಂ.

20. ಬುದ್ಧನು ........................................................................................ ನನ್ನು ಅರಸುತ್ತಾ ಬಂದನು.

21. ಮಂಜಪ್ಪನವರ ಕಾಲದಲ್ಲಿ ವಿದ್ಯಾರ್ಥಿಗಳ ಮುಖ್ಯ ಗುರಿ ............................................................ ಆಗಿತ್ತು.

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರ ಬರೆಯಿರಿ : 10 × 1 = 10

22. ಅಂಗುಲೀಮಾಲನ ದೃಷ್ಟಿಯಲ್ಲಿ ಬುದ್ಧನಿಗೆ ಯಾವ ಅರಿವಿರಲಿಲ್ಲ ?

23. ಮೇಷ್ಟ್ರ ಮಕ್ಕಳು ಶಾಲೆಯಲ್ಲಿ ಬಂದು ಕೂಡಲು ಕಾರಣವೇನು ?

24. ಮೇಷ್ಟ್ರು ಯಾವುದಕ್ಕಾಗಿ ಹೆಚ್ಚು ಸಂಕಟಪಡುತ್ತಿದ್ದರು ?



www.careerindia.com

CAREERINDIA



25. ವಿಧಾನಸೌಧದ ಆರಂಭೋತ್ಸವ ಎಂದು ಜರುಗಿತು ?

26. ಸಿಂಹವನ್ನು ಕೊಂದ ಮೊಲದ ಹೆಸರೇನು ?

27. ವದನದಲ್ಲಿ ಏನಿರಬೇಕು ?

28. ಧನದ ಸದುಪಯೋಗ ಹೇಗೆ ?

29. ಯಾವುದರಲ್ಲಿ ಮಿತವಿರಬೇಕೆಂದು ಡಿ.ವಿ.ಜಿ. ಹೇಳಿದ್ದಾರೆ ?

30. ಜನಪದರು ಬೆಳಗಾಗಿ ಎದ್ದು ಯಾರನ್ನು ನೆನೆಯುತ್ತಾರೆ ?

31. ದುರ್ಯೋಧನ ಕೆಳಗೆ ಬಿದ್ದುದನ್ನು ಯಾವುದಕ್ಕೆ ಹೋಲಿಸಲಾಗಿದೆ ?

www.careerindia.com

CAREERINDIA



ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 15 × 2 = 30

32. ನಕ್ಕಾಗ ಮುಖದಲ್ಲಿ ಆಗುವ ಬದಲಾವಣೆ ಏನು ?

33. ಬುದ್ಧನ ಅಪ್ಪುಗೆಯ ಸುಖವನ್ನು ಅನುಭವಿಸಿದ ಅಂಗುಲೀಮಾಲ ತನ್ನಲ್ಲೇ ಹೇಳಿಕೊಂಡಿದ್ದೇನು ?

www.careerindia.com

CAREERINDIA



34. ತಿಪ್ಪೇನಹಳ್ಳಿ ಪಾಠಶಾಲೆಯ ಸೂಚನಾ ಫಲಕದಲ್ಲಿ ಬರೆದ ಸೂಚನೆಗಳಾವುವು ?

35. ಬಿಡುವಿನ ಸಮಯದಲ್ಲಿ ಮಂಜಪ್ಪನವರು ಆಸಕ್ತಿಯಿಂದ ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳಾವುವು ?

www.careerindia.com

CAREERINDIA



36. ನಮ್ಮ ಕಡೆಗೆ ನಿಷೇಧಾತ್ಮಕ ಭಾವನೆಗಳು ಸುಳಿಯದಂತೆ ಇರಬೇಕಾದರೆ ನಾವು ಏನು ಮಾಡಬೇಕು ?

37. ಯಾವ ಯಾವ ಕಾರಣಗಳಿಂದ ಯುದ್ಧಗಳುಂಟಾಗುತ್ತವೆ ?

www.careerindia.com

CAREERINDIA



38. ಪಶುಲೋಮನು ಇಂದ್ರಾದಿ ದೇವತೆಗಳನ್ನು ಏನೆಂದು ಬೇಡಿಕೊಂಡನು ?

39. ಪಶುಲೋಮನ ಆತ್ಮಹತ್ಯಾ ಪ್ರಯತ್ನಕ್ಕೆ ಅಮಾತ್ಯರಾಕ್ಷಸನು ಊಹಿಸಿಕೊಂಡ ಕಾರಣಗಳಾವುವು ?

www.careerindia.com

CAREERINDIA



40. ಸರ್ವಜ್ಞರಾಗಲು ನಾವು ಏನೇನನ್ನು ಮಾಡಬೇಕೆಂದು ಪುಲಿಗೆರೆ ಸೋಮನಾಥ ಹೇಳಿದ್ದಾರೆ ?

41. ಪ್ರಜಾಮಾತೆಯ ವೈಶಿಷ್ಟ್ಯವೇನು ?

www.careerindia.com

CAREERINDIA



42. ಸತಿ, ಸ್ನೇಹ, ಬಯಕೆ ಮತ್ತು ದೈವಗಳ ವಿಚಾರದಲ್ಲಿ ಕನಕದಾಸರ ಅಭಿಪ್ರಾಯವೇನು ?

43. ಯಾರಲ್ಲಿ ಶೌರ್ಯವನ್ನು ತೋರಿಸು ಎಂದು ಅರ್ಜುನ ಶಬರನಿಗೆ ಹೇಳಿದನು ?

44. ಬೇಡ ವೇಷಧಾರಿಯಾದ ಶಿವ ಅರ್ಜುನನನ್ನು ಅಪಹಾಸ್ಯ ಮಾಡಿದುದೇಕೆ ?

www.careerindia.com

CAREERINDIA



45. ಹುಳಿ ಮತ್ತು ಸಿಹಿ ರುಚಿಯಿರುವ ಫಲಗಳಾವುವೆಂದು ಅಕ್ಕಮಹಾದೇವಿ ಹೇಳಿದ್ದಾರೆ ?

46. ಯೋಗ ಹೇಗಿರಬೇಕೆಂದು ಮುಕ್ತಾಯಕ್ಕ ಅಭಿಪ್ರಾಯಪಡುತ್ತಾಳೆ ?

www.careerindia.com

CAREERINDIA



ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ : $5 \times 3 = 15$

47. "ಈ ಸಭಾಗೃಹದಲ್ಲಿಯ ಅರ್ಧದಷ್ಟು ಜನರು ಕತ್ತೆಗಳಲ್ಲ."

48. "ಶಕ್ತನಾದರೆ ನೆಂಟರೆಲ್ಲ ಹಿತರು, ಅಶಕ್ತನಾದರೆ ಆಪ್ತ ಜನರೇ ವೈರಿಗಳು."

www.careerindia.com

49. “ದೇಶದ ರಕ್ಷಣೆಯ ಜವಾಬ್ದಾರಿ ಕೇಂದ್ರ ಮಂತ್ರಿಮಂಡಲದ್ದಾಗಿರುತ್ತದೆ.”

50. “ಬಂಗಾರದ ಮೋರೆ ತೊಳೆದೇನ.”

www.careerindia.com

51. “ವೇದ ಕುರಾನ ಬೈಬಲ್ ಸಿಂಧು ನೀ.”

________________________________________

________________________________________

________________________________________

________________________________________

________________________________________

________________________________________

________________________________________

________________________________________

________________________________________

________________________________________

ಈ ಲೇಖಕ/ಕವಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ : $2 \times 3 = 6$

52. ಎಂ. ಮರಿಯಪ್ಪಭಟ್ಟರು

________________________________________

________________________________________

________________________________________

________________________________________

53. ರನ್ನ

________________________________________

________________________________________

________________________________________

________________________________________

www.careerindia.com

CAREERINDIA



54. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3

ಬೇಡ ನಿನಗೇಕೆ ಸಾಹಸ

ದಾಡಂಬರಮೆನ್ನೊಳಾಹವಕ್ಕನುಗುಣನಂ

---

55. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ : 1 × 3 = 3

"ಅಳುವ ಕಂದನ ತುಟಿಯು ಹವಳದ ಕುಡಿಯಂಗ."

---

56. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದೀತೆ ?
— ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು.
— ಹಾಸಿಗೆ ಇದ್ದಷ್ಟು ಕಾಲು ಚಾಚು.

---



www.careerindia.com

CAREERINDIA



57. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಪರರ ಕಣ್ಣ ______________________

______________________

______________________

______________________ ದೀಪ್ತಿಯಲಿ ಬೆಳೆ !

ಅಥವಾ

ನಗು ಮನದಿ ______________________

______________________

______________________

______________________ ತೆರಳು ಮಂಕುತಿಮ್ಮ.

www.careerindia.com

CAREERINDIA



58. ಈ ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ : 1 × 4 = 4

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ
ರ್ಗೆರೆವಟ್ಟಾಗಿರು ಶಿಷ್ಟರಂ ಪೊರೆ ಎನುತ್ತಿಂತೆಲ್ಲಮಂ ಪಿಂತೆ ತಾ
ನೆರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ.

59. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ಸಿದ್ದೇಗೌಡರ ಮನೆಗೆ ಬೆಳಕಾಗಿ ಬಂದ ಗೌರಿ 'ತ್ಯಾಗಮಯಿ' ಹೇಗೆ ಎಂಬುದನ್ನು ವಿವರಿಸಿ.
— ಮೊಲವು ಸಿಂಹವನ್ನು ಕೊಲ್ಲಲು ತೋರಿದ ಜಾಣತನ ಕುರಿತು ವಿವರಿಸಿ.
— ಅಂಗುಲೀಮಾಲನ ಮನಃಪರಿವರ್ತನೆಗೆ ಕಾರಣವಾದ ಬುದ್ಧನ ಮಾತುಗಳಾವುವು ?

www.careerindia.com

CAREERINDIA



60.

61. ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಕುರಿತು ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ನಕುಲ ಭೀಮಾರ್ಜುನರು ಸರೋವರದ ಬಳಿಗೆ ಬರಲು ಕಾರಣವಾದ ಪ್ರಸಂಗ, ಪರಿಣಾಮಗಳನ್ನು ನಿಮ್ಮ ಮಾತಿನಲ್ಲಿ ವಿವರಿಸಿ.

— ಭೀಮ ದುರ್ಯೋಧನರು ಪರಸ್ಪರ ಹೊಡೆದಾಡಿದ ಸನ್ನಿವೇಶವನ್ನೂ, ಅದರ ಪರಿಣಾಮವನ್ನು ವಿವರಿಸಿ.

www.careerindia.com

62. — ನಿಮ್ಮ ಗ್ರಾಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುವಂತೆ ಕೋರಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ. $1 \times 5 = 5$

ಅಥವಾ

— ಶೈಕ್ಷಣಿಕ ಪ್ರವಾಸಕ್ಕೆ ಹೋಗಲು 1500 ರೂ.ಗಳನ್ನು ಕಳುಹಿಸಿಕೊಡುವಂತೆ ಕೋರಿ ಬೇರೆ ಊರಿನಲ್ಲಿರುವ ನಿಮ್ಮ ತಂದೆಯವರಿಗೆ ಪತ್ರ ಬರೆಯಿರಿ.

www.careerindia.com

CAREERINDIA



63. ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದಕ್ಕೆ ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : 1 × 5 = 5

— ಮೂಢನಂಬಿಕೆಯ ದುಷ್ಪರಿಣಾಮಗಳು

— ಜನಜಾಗೃತಿ ಮೂಡಿಸುವಲ್ಲಿ ಮಾಧ್ಯಮಗಳ ಪಾತ್ರ

— ಜನಸಂಖ್ಯಾ ಸ್ಫೋಟಕ್ಕೆ ಕಾರಣಗಳು

www.careerindia.com

www.careerindia.com